**ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹೊನ್ನಾವರ.**

**ಸಿ.ಸಿ.ನಂ:2567/2022**

**ಫಿರ್ಯಾದಿ** : **ಶ್ರೀ ರಾಮನಾಥ ಪತ್ತಿನ ಸಹಕಾರಿ ಸಂಘ ನಿಯಮಿತ.,**
ಹೊನ್ನಾವರ, ನಿಷ್ಪತ್ ಶಾಖಾ ವ್ಯವಸ್ಥಾಪಕರು, ಶ್ರೀ ದೀಪಕ ಡಿ. ನಾಯ್ಕ,
ಸಾಯಿದರ್ಶನ ಕಾಂಪ್ಲೆಕ್ಸ್, ಹೊನ್ನಾವರ, ತಾಃ ಹೊನ್ನಾವರ, ಉ.ಕ.,

**ವಿರುದ್ಧ**

ಆರೋಪಿಯ ಹೆಸರು : ಶ್ರೀ ಚಂದ್ರಕಾಂತ ದೇವು ಮುಕ್ರಿ ತಂದೆ ದೇವು ಮುಕ್ರಿ
ಸಾಃ ಜೋಗ್ನಿಕಟ್ಟೆ, ಹಳದಿಪುರ, ತಾಃ ಹೊನ್ನಾವರ ಉ.ಕ.,

**ಆಪಾದನೆ**

ಶ್ರೀ ಚಂದ್ರಶೇಖರ ಈ ಬಣಕಾರ., ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಯಾದ ನಾನು ಆರೋಪಿಯಾದ ನಿನ್ನ ಮೇಲೆ ಈ ಕೆಳಕಂಡ ಆರೋಪಣೆಗಳನ್ನ ಹೊರಿಸುತ್ತಿದ್ದೇನೆ.

ನಿಮ್ಮ ಮೇಲೆ ಹೊರಿಸುವ ಅಪಾದನೆ ಏನೆಂದರೆಃ-

ಆರೋಪಿಯಾದ ನೀನು ಪಿರ್ಯಾದಿ ಸಂಸ್ಥೆಯ ಸಾಲದ ಹಣದ ಮರುಪಾವತಿಗಾಗಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಹೊನ್ನಾವರ ಶಾಖೆಯ ಚೆಕ್ ನಂಃ 389817 ನೇದನ್ನು ದಿನಾಂಕಃ 06-08-2022 ರಂದು ರೂ.72,000,/- (ರೂಪಾಯಿ ಎಪ್ಪತ್ತೆರಡು ಸಾವಿರ ರೂಗಳು ಮಾತ್ರ)ಕ್ಕೆ ಬರೆದು ಸಹಿ ಮಾಡಿಕೊಟ್ಟಿದ್ದು, ಸದ್ರಿ ಚೆಕನ್ನು ಫಿರ್ಯಾದಿಯು ತಮ್ಮ ಸಂಸ್ಥೆಯ ಖಾತೆಯಿರುವ ಕೆಡಿಸಿಸಿ ಬ್ಯಾಂಕ್, ಹೊನ್ನಾವರ ಶಾಖೆಗೆ ಹಾಜರು ಪಡಿಸಿದಾಗ ಬ್ಯಾಂಕಿನವರು ( Funds Insufficient) ಎಂದು ತಿಳಿಸಿ 18-08-2022 ರಂದು ವಾಪಸ್ ಮಾಡಿರುತ್ತಾರೆ. ಈ ಕುರಿತು ಫಿರ್ಯಾದಿಯು ನಿಮಗೆ ತಮ್ಮ ವಕೀಲರ ಮೂಲಕ ದಿನಾಂಕ 01-09-2022 ರಂದು ರಜಿಸ್ಟರ್ಡ ನೋಟಿಸು ಕೊಟ್ಟಿದ್ದು, ಸದ್ರಿ ನೋಟಿಸು ಜಾರಿಯಾಗಿದ್ದಾರೂ ಸಹ ಚೆಕ್ಕಿನಲ್ಲಿ ನಮೂದಿಸಿದ ಹಣವನ್ನು ಕೊಡದೇ ನೆಗೋಶಿಯಬಲ್ ಇನಸ್ಟ್ರುಮೆಂಟ್ ಕಾಯಿದೆ ಕಲಂ 138 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

ಪ್ರಶ್ನೆಃ 1) ಈ ಮೇಲೆ ಓದಿ ಹೇಳಿದ ಆಪಾದನೆ ಅರ್ಥವಾಯಿತೆ?

ಉತ್ತರಃ

ಪ್ರಶ್ನೆಃ 2) ನೀನು ಸದರ ಆಪಾದನೆ ಒಪ್ಪುವಿಯೋ ಅಥವಾ ನಿನ್ನ ಪ್ರತಿರಕ್ಷಣೆ ಇದೆಯೇ

ಉತ್ತರಃ

(ಮೇಲಿನ ಆಪಾದನೆಯನ್ನು ಆರೋಪಿಗೆ ಓದಿ ಹೇಳಿ ಅವನಿಂದ ಬಂದ ಉತ್ತರಗಳನ್ನು ನನ್ನ ಕೈ ಬರಹದಲ್ಲಿ ಬರೆದುಕೊಂಡೆ ಎಂದು ದೃಢೀಕರಿಸುತ್ತೇನೆ)

**ದಿನಾಂಕಃ** - -2024

(**ಚಂದ್ರಶೇಖರ ಈ ಬಣಕಾರ**).,
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.ರವರ ನ್ಯಾಯಾಲಯ.,ಹೊನ್ನಾವರ.

ಆರೋಪಿಃ